**<u>ದಿನಾಂಕಃ 18-06-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.</u>**

**<u>ಪಾಟೀ ಸವಾಲುಃ ದೂರುದಾರನ ಪರ ಶ್ರೀ ಪಿ. ವಿ.ಕೆ. ವಕೀಲರಿಂದಃ</u>**

1. ನ್ಯಾಯಾಲಯದಿಂದ ಸಮನ್ಸ ಪಡೆಯುವ ಮುಂಚೆ ನನಗೆ ವಕೀಲರಿಂದ ನೋಟಿಸು ಬಂದಿತ್ತು ಮತ್ತು ಸದರಿ ನೋಟಿಸಿಗೆ ನಾನು ಸಣ್ಣಮನಿ ವಕೀಲರ ಮೂಲಕ ಉತ್ತರ ಕೊಡಿಸಿದ್ದೇನೆ ಎಂದರೆ ನಿಜ. ಸದರಿ ಉತ್ತರದಲ್ಲಿ ಏನು ಬರೆಯಲಾಗಿತ್ತು ಎನ್ನುವುದನ್ನು ನಾನು ಓದಿ ತಿಳಿದುಕೊಂಡಿಲ್ಲ. ನೋಟಿಸಿಗೆ ಉತ್ತರ ತಯಾರಿಸಲು ಸಣ್ಣಮನಿ ವಕೀಲರಿಗೆ ನಾನು ಮಾಹಿತಿ ನೀಡಿರಲಿಲ್ಲ ಏಕೆಂದರೆ ನಾನು ಬೆಂಗಳೂರಿನಲ್ಲಿದ್ದೆ. ಬೇರೆ ಯಾರು ಮಾಹಿತಿ ನೀಡಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಈ ಪ್ರಕರಣದಲ್ಲಿ ಹಾಜರಾದ ನಂತರ ಸದರಿ ಉತ್ತರವನ್ನು ಓದಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದನ್ನು ಓದಿದ ನಂತರವೇ ಬೇರೆ ವಕೀಲರನ್ನು ನೇಮಕ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

2. ಹೆಚ್ ಡಿ ಎಫ್ ಸಿ ಬ್ಯಾಂಕ್ ನಲ್ಲಿ ನಾನು " ಓರಿಸನ್ ಹೈಬ್ರೀಡ್ ಸೀಡ್ಸ" ಹೆಸರಿನಲ್ಲಿ ಖಾತೆ ತೆರೆದಿದ್ದೇನೆ ಎಂದರೆ ನಿಜ. ಸದರಿ ಸಂಸ್ಥೆಯ ಪರ ವ್ಯವಹಾರ ಮಾಡಲು ನಿಮಗೆ ಮಾತ್ರ ಅಧಿಕಾರ ಇದೆ ಎಂದರೆ ಸಾಕ್ಷಿಯು ಪಾಲುದಾರನಿಗೂ ಅಧಿಕಾರ ಇದೆ ಎಂದು ನುಡಿಯುತ್ತಾರೆ. ಅದರ ಕುರಿತು ಪಾಲುದಾರಿಕೆ ಪತ್ರ ಇದೆ. ಸದರಿ ದಾಖಲೆಯನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ಸದರಿ ಸಂಸ್ಥೆ ಪಾಲುದಾರಿಗೆ ಸಂಸ್ಥೆಯಾಗಿರುತ್ತದೆ.

3. ನಿಪಿ-1 ಎಂದು ಗುರುತಿಸಲಾಗಿರುವ ಚೆಕ್ ನ್ನು ಈಗ ನೋಡುತ್ತಿದ್ದು, ಅದರಲ್ಲಿರುವ ಸಹಿ ನನ್ನದಲ್ಲ. ಅದು ಯಾರ ಸಹಿ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಚೆಕ್ ದೂರುದಾರನ ಬಳಿ ಹೇಗೆ ಹೋಯಿತು ಎನ್ನುವುದು ನನಗೆ ಗೊತ್ತಿಲ್ಲ. ಓರಿಸನ್ ಹೈಬ್ರೀಡ್ ಸೀಡ್ಸ ಹೆಸರಿನಲ್ಲಿ ಬ್ಯಾಂಕ್

ಖಾತೆ ತೆರೆಯುವಾಗ ಸಂಬಂಧ ಪಟ್ಟ ದಾಖಲೆಗಳಿಗೆ ನಾನು ಹಾಗೂ ಇತರ ಪಾಲುದಾರರು ಸಹಿ ಮಾಡಿದ್ದೇವೆ. ಇತರ ಪಾಲುದಾರರು ಎಂದರೆ ಸೈಯದ್ ಅತೀಯಾಬಾನು. ಬ್ಯಾಂಕ್ ಖಾತೆಯನ್ನು 2012 ರಲ್ಲಿ ಪ್ರಾರಂಭಿಸಿದ್ದೇವೆ. ನನ್ನ ಪರ ವಕೀಲರು ಸಲ್ಲಿಸಿರುವ ವಕಾಲತ್ ನಾಮಾ ವನ್ನು ಈಗ ನೋಡುತ್ತಿದ್ದು, ಅದರಲ್ಲಿ ನನ್ನ ಸಹಿ ಇದೆ. ದಿಃ 24-05-2019 ರಂದು ಶ್ರೀ ಕೆ ಜಿ ಸಣ್ಣಮನಿ ವಕೀಲರು ಸಲ್ಲಿಸಿರುವ ವಕಾಲತ್ ನಾಮಾವನ್ನು ನಿಪಿ-29 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು. ಸದರಿ ವಕಾಲತ್ ನಲ್ಲಿರುವ ಸಹಿ ಹಾಗೂ ನಿಪಿ-1 ಚೆಕ್ ನಲ್ಲಿರುವ ಸಹಿ ಎರಡೂ ಒಂದೇ ಎಂದರೆ ಸರಿಯಲ್ಲ. ಚೆಕ್ ನಲ್ಲಿರುವ ಸಹಿ ನನ್ನದಲ್ಲ ಎಂದು ಇಂದೇ ಮೊದಲ ಬಾರಿಗೆ ಹೇಳುತ್ತೀದ್ದೀರಿ ಎಂದರೆ ಸಾಕ್ಷಿಯು ಈ ಮೊದಲು ಯಾರೂ ಕೇಳಿರಲಿಲ್ಲ ಎಂದು ನುಡಿಯುತ್ತಾರೆ.

4. ನಿಪಿ-5 ಎಂದು ಗುರುತಿಸಲಾಗಿರುವ ಒಂದುದಾಖಲೆಯನ್ನು ಸಾಕ್ಷಿಗೆ ತೋರಿಸಿ, ಅದರಲ್ಲಿರುವ ಸಹಿ 5 ನೇ ಆರೋಪಿತನಾದ ವಿಜಯಕುಮಾರ ಬಿರಾದಾರ್ ಅವರದ್ದು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾನು ಓರಿಸನ್ ಹೈಬ್ರೀಡ್ ಸೀಡ್ಸ ಸಂಸ್ಥೆಯ ಮ್ಯಾನೇಜರ್ ಎಂದು ಸೂಚಿಸುವುದು ಸರಿಯಲ್ಲ, ಆದರೆ ನಾನು ಸದರಿ ಸಂಸ್ಥೆಯ ಪಾಲುದಾರನಾಗಿದ್ದೇನೆ. ನೆಕ್ಸ್ಟ್ ಜೆನ್ ಕ್ರಾಪ್ ಸೈನ್ಸ ಎಲ್ ಎಲ್ ಪಿ ಬೆಂಗಳೂರು ಇದು ಓರಿಸನ್ ಹೈಬ್ರೀಡ್ ಸೀಡ್ಸ ಗೆ ಸಂಬಂಧಿಸಿದ ಇನ್ನೊಂದು ಸಂಸ್ಥೆಯೆಂದರೆ ಸಾಕ್ಷಿಯು ಅವೆರಡೂ ಬೇರೆ ಬೇರೆ ಸಂಸ್ಥೆಗಳು ಎಂದು ನುಡಿಯುತ್ತಾರೆ.

5. ವಿಜಯಕುಮಾರ ಬಿರಾದಾರ್ ಅವರು ನಮ್ಮ ಸಂಸ್ಥೆಯ ಫೀಲ್ಡ್ ಮ್ಯಾನೇಜರ್ ಆಗಿದ್ದಾರೆ ಎಂದರೆ ನಿಜ. ನಾನು ಹಾಗೂ ವಿಜಯಕುಮಾರ ಇಬ್ಬರೂ ಸೇರಿಯೇ ಸಣ್ಣಮನಿ ವಕೀಲರನ್ನು

ನಮ್ಮ ಪರ ವಕಾಲತ್ತು ವಹಿಸಲು ನೇಮಿಸಿಕೊಂಡಿದ್ದೆವು ಎಂದರೆ ನಿಜ. ವಿಜಯಕುಮಾರು ಬಿರಾದಾರ್ ಅವರು ಕಳೆದ 8-9 ವರ್ಷಗಳಿಂದ ನಮ್ಮ ಬಳಿ ಕೆಲಸ ಮಾಡುತ್ತಾರೆ. ಸದರಿ ವಿಜಯಕುಮಾರ ಅವರ ಸಹಿಗಳನ್ನು ನಾನು ಗುರುತಿಸಬಲ್ಲೆ. ನಿಪಿ-22 ಎಂದು ಗುರುತಿಸಲಾಗಿರುವ ಬಿಲ್ ನಲ್ಲಿ ಹಾಗೂ ನಿಪಿ-29 ಎಂದು ಗುರುತಿಸಲಾಗಿರುವ ವಕಾಲತ್ ನಲ್ಲಿ ಇರುವ ಸಹಿಗಳು ವಿಜಯಕುಮಾರ ಬಿರಾದಾರ್ ಅವರದ್ದು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

6. ಈ ಪ್ರಕರಣದಲ್ಲಿ ದೂರುದಾರನು ಯಾವ ದಾಖಲೆಗಳನ್ನು ಹಾಜರು ಪಡಿಸಿದ್ದಾರೆ ಎಂದು ನಾನು ತಿಳಿದುಕೊಂಡಿಲ್ಲ. ದೂರುದಾರರು ಮಲ್ಚ್ , ಮೆಶ್, ಕೋಕೋ ಪಿಟ್ ಇತ್ಯಾದಿಗಳನ್ನು ಮಾರಾಟ ಮಾಡುತ್ತಾರೆ ಎಂದರೆ ನಿಜ. ನನಗೆ ದೂರುದಾರ ಮತ್ತು ಆತನ ಸಹೋದರನ ಪರಿಚಯ ಇದೆ. ದೂರುದಾರನು ಸದರಿ ವ್ಯವಹಾರವನ್ನು ಸುಮಾರು 20 ವರ್ಷಗಳಿಂದ ಮಾಡುತ್ತಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ದೂರುದಾರನಿಂದ 2016 ನೇ ಇಸ್ವಿಯವರೆಗೆ ನಾವು ವಸ್ತುಗಳನ್ನು ಖರೀದಿಸಿದ್ದೇವೆ. 2016 ಕ್ಕಿಂತ ಮುಂಚೆ ನಾವು ದೂರುದಾರನಿಂದ ಎಷ್ಟು ಮೊತ್ತದ ಹಾಗೂ ಯಾವ ವಸ್ತುಗಳನ್ನು ಖರೀದಿಸಿದ್ದೆವು ಎಂದು ತೋರಿಸಲು ನನ್ನ ಬಳಿ ದಾಖಲೆ ಇವೆ. ನಾನು ದೂರುದಾರನಿಂದ ಖರೀದಿಸಿದ ವಸ್ತುಗಳ ಕುರಿತು ನಗದು ಹಣ ಪಾವತಿ ಮಾಡುತ್ತಿದ್ದೆ. ಹಣ ಪಾವತಿ ಮಾಡಿದ ಕುರಿತು ನನ್ನ ಬಳಿ ದಾಖಲೆಗಳು ಇರಬಹುದು. ದೂರುದಾರನಿಂದ ನೀವು ಉದ್ರಿ ಆಧಾರದ ಮೇಲೂ ಸಹ ವಸ್ತುಗಳನ್ನು ಖರೀದಿಸುತ್ತಿದ್ದಿರಿ ಎಂದರೆ ಸಾಕ್ಷಿಯು ಸಣ್ಣಮೊತ್ತದ ವಸ್ತುಗಳನ್ನು ಖರೀದಿಸುತ್ತಿದ್ದೆ ಎಂದು ನುಡಿಯುತ್ತಾರೆ. ನಿಪಿ-18 ರಿಂದ 28 ರಲ್ಲಿರುವ ಬಿಲ್ ಗಳ ಪ್ರಕಾರ ನಾವು ದೂರುದಾರನಿಂದ ಮೆಶ್, ಕೋಕೋಪಿಟ್ , ಮಲ್ಚ್

ಹಾಗೂ ಇತರ ವಸ್ತುಗಳನ್ನು ಖರೀದಿಸಿದ್ದೇವೆ ಎಂದರೆ ಸರಿಯಲ್ಲ . ದಿಃ 05-06-2018 ರಂದು ನೆಕ್ಸ್ಟ ಜನ್ ಕ್ರಾಪ್ ಸೈನ್ಸ ಕಂಪನಿಗಾಗಿ ವಿಜಯಕುಮಾರ ಅವರು ದೂರುದಾರನಿಂದ 1,65,672/- ರೂಪಾಯಿ ಬೆಲೆಯ ವಸ್ತುಗಳನ್ನು ಖರೀದಿಸಿದ್ದಾರೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ ವಸ್ತುಗಳನ್ನು ಲಾರಿ ನೋಂದಣಿ ಸಂಖ್ಯೆ ಕೆ ಎ 35 ಬಿ 0442 ನೇದ್ದರ ಮೂಲಕ ಸಾಗಿಸಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. 2016 ನೇ ಇಸ್ವಿಯ ನಂತರವೂ ಸಹ ನಾವು ದೂರುದಾರನಿಂದ ಸಾಮಗ್ರಿಗಳನ್ನು ಖರೀದಿಸಿದ್ದರೂ ಸಹ ಈಗ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

7. ದೂರುದಾರ ಮಿತ್ತೈಶ್ ಅವರ ಪರಿಚಯ ನನಗೆ ಆತನ ಸಹೋದರನಿಂದ ಆಗಿದೆ. ಆತನ ಸಹೋದರನ ಹೆಸರು ಶ್ರೀಪಾಲ . ದೂರುದಾರನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಶ್ರೀಪಾಲ್ ಅವರ ಮನೆ ಎಲ್ಲಿದೆ ಎನ್ನುವುದು ನನಗೆ ಗೊತ್ತಿಲ್ಲ. ನನಗೆ ಶ್ರೀಪಾಲ್ ಅವರ ಪರಿಚಯ 2012 ರಲ್ಲಿ ಆಗಿರುತ್ತದೆ. ಆತ ಬಟ್ಟೆ ವ್ಯಾಪಾರ ಮಾಡುತ್ತಾರೆ. 2016 ಕ್ಕಿಂತ ಮುಂಚೆ ನಾನು ಮಿತ್ತೈಶ್ ಅವರೊಂದಿಗೆ ವ್ಯವಹಾರ ಮಾಡಿದ್ದೇನೆ ಎಂದರೆ ಸರಿಯಲ್ಲ . 2016 ರ ಮುಂಚೆ ಶ್ರೀಪಾಲ್ ಅವರಿಂದ ಸಾಮಗ್ರಿ ಖರೀದಿಸಿದ್ದೇವೆ ಎಂದು ತೋರಿಸಲು ನನ್ನ ಬಳಿ ದಾಖಲೆ ಇವೆ.

8. ದೂರುದಾರನ ಸಂಸ್ಥೆಯಿಂದ ಖರೀದಿ ಮಾಡಿದ್ದ ವಸ್ತುಗಳ ಕುರಿತು ಹಣದ ತಿರುವಳಿಗಾಗಿ 3 ಚೆಕ್‌ಗಳನ್ನು ಅಂದರೆ ಚೆಕ್ ನಂಃ 000453, 000455 ಮತ್ತು 000456 ನೇದ್ದವುಗಳನ್ನು ನೀಡಿದ್ದೆ ಎಂದರೆ ಸರಿಯಲ್ಲ . ಚೆಕ್ ನಂಃ 000455 ಮತ್ತು 000456 ನೇದ್ದರಲ್ಲಿ ಮುಂದಿನ ದಿನಾಂಕಗಳನ್ನು ನಮೂದಿಸಿ, ನೀಡಿದ್ದೆ ಎಂದರೆ ಸರಿಯಲ್ಲ . ಬಾಕಿ ಹಣದ ತಿರುವಳಿಗಾಗಿ ಸದರಿ ಚೆಕ್ ಗಳನ್ನು ನಾನೇ ಬರೆದು, ಸಹಿ ಮಾಡಿ ನೀಡಿದ್ದೇನೆ ಎಂದರೆ ಸರಿಯಲ್ಲ .

9. ಸಿಸಿ ನಂಃ 187/2019 ನೇದ್ದು ಯಾವ ಚೆಕ್ ಗೆ ಸಂಬಂಧಪಟ್ಟದ್ದು ಎನ್ನುವುದು ನನಗೆ ಗೊತ್ತಿಲ್ಲ. ಸದರಿ ಪ್ರಕರಣದಲ್ಲಿ ಯಾವ ದಾಖಲೆಗಳನ್ನು ಹಾಜರು ಪಡಿಸಲಾಗಿದೆ ಎನ್ನುವುದನ್ನು ನಾನು ತಿಳಿದುಕೊಂಡಿಲ್ಲ. ನನ್ನ ಮಾಹಿತಿ ಇಲ್ಲದೇ ನೋಟಿಸಿಗೆ ಉತ್ತರ ನೀಡಿದ್ದಕ್ಕಾಗಿ ವಕೀಲರ ವಿರುದ್ಧ ನಾನು ಯಾವುದೇ ಕ್ರಮ ಕೈಗೊಂಡಿಲ್ಲ ವಸ್ತುಗಳನ್ನು ಖರೀದಿ ಮಾಡಿರುವ ಕುರಿತು ಸದರಿ ಉತ್ತರದಲ್ಲಿ ನಮೂದಿಸಿದ್ದರು ಆದರೆ ನಾನು ಯಾವುದೇ ವಸ್ತುಗಳನ್ನು ಖರೀದಿಸಿಲ್ಲ. ಮೂರೂ ಚೆಕ್ ಗಳು ದೂರುದಾರನ ಬಳಿ ಹೇಗೆ ಹೋದವು ಎಂದು ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ತಾನು ಚೆಕ್ ಗಳನ್ನು ಶ್ರೀಪಾಲ್ ಅವರಿಗೆ 2016 ರ ಆಗಸ್ಟ ಅಥವಾ ಸೆಪ್ಟೆಂಬರ್ ನಲ್ಲಿ ನೀಡಿದ್ದೆ ಎಂದು ನುಡಿಯುತ್ತಾರೆ. ಸದರಿ ಚೆಕ್ ಗಳನ್ನು ನೀಡಿದಾಗ ಶ್ರೀಪಾಲ್ ಒಬ್ಬರೇ ಇದ್ದರು. ಶ್ರೀಪಾಲ್ ಅವರೊಂದಿಗೆ ಹಣಕಾಸಿನ ವ್ಯವಹಾರ ಇದ್ದುದ್ದರಿಂದ ಅವರಿಗೆ ಚೆಕ್ ಗಳನ್ನು ನೀಡಿದ್ದೆ. ಸೆಪ್ಟೆಂಬರ್ 2016 ರಲ್ಲಿ ಶ್ರೀಪಾಲ್ ಅವರಿಂದ 5 ಲಕ್ಷ ರೂಪಾಯಿ ಸಾಲ ಪಡೆದಿದ್ದೆ ಆದರೆ ದಿನಾಂಕ ನೆನಪಿಲ್ಲ. ಸದರಿ ಹಣದ ತಿರುವಳಿಗಾಗಿ ಶ್ರೀಪಾಲ್ ಅವರು ನನ್ನ ಆಸ್ತಿಯನ್ನು ಕಿಶೋರ್ ಮೆಹರ್ ವಾಡೆ ಅವರ ಹೆಸರಿನಲ್ಲಿ ಖರೀದಿಸಿದ್ದಾರೆ. ಸದರಿ ಕಿಶೋರ್ ಅವರ ಮೊಬೈಲ್ ನಂಬರ್ ಗೊತ್ತಿಲ್ಲ. ಕಿಶೋರ್ ಅವರಿಗೆ ಯಾವ ಆಸ್ತಿಯ ಕುರಿತು ಖರೀದಿ ಪತ್ರ ಬರೆದುಕೊಟ್ಟಿದ್ದೇನೆ ಎನ್ನುವುದು ನೆನಪಿಲ್ಲ. ಸದರಿ ಆಸ್ತಿಯನ್ನು 11 ಲಕ್ಷ ಹಾಗೂ ಚಿಲ್ಲರೆ ಹಣಕ್ಕೆ ಮಾರಾಟ ಮಾಡಿದ ಕುರಿತು ಖರೀದಿ ಪತ್ರದಲ್ಲಿ ಬರೆಯಲಾಗಿದೆ ಸದರಿ ಖರೀದಿ ಪತ್ರವನ್ನು ರಾಣೇಬೆನ್ನೂರು ಉಪನೊಂದಣಿ ಅಧಿಕಾರಿಗಳ ಕಚೇರಿಯಲ್ಲಿ ಮಾಡಲಾಗಿದೆ.

**<u>ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು .</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,

ರಾಣೇಬೆನ್ನೂರು.